# ಹರಿಹರನ ಶತಕದ್ವಯಗಳು: ಭಕ್ತಿಯ ಪರಾಕಾಷ್ಠೆಯ ಪ್ರತಿನಿಧಿಗಳು

12ನೇ ಶತಮಾನದಲ್ಲಿ ಕನ್ನಡ ಸಾಹಿತ್ಯಕ್ಕೊಂದು ಹೊಸ ಪರಂಪರೆಯ ಹೆದ್ದಾರಿಯ ಮಾರ್ಗವನ್ನು ತೆರೆದು, ಭಕ್ತಿಯ ಪರಾಕಾಷ್ಠೆಯನ್ನು ಮೆರೆದು ಭಕ್ತಕವಿ, ಕ್ರಾಂತಿ ಕವಿ, ರಗಳೆಯ ಕವಿ ಎಂದು ಹೆಸರು ಪಡೆದು ಜನಮಾನಸದಲ್ಲಿ ಚಿರಸ್ಥಾಯಿಯಾಗಿರುವ ಹೆಸರು ಹರಿಹರನದು. ಅದುವರೆಗೂ ಪುರಾಣ ಪುರುಷರು, ರಾಜ ಮಹಾರಾಜರುಗಳು ಕಾವ್ಯದ ವಸ್ತುವಾಗಿದ್ದರೆ ಸಾಮಾನ್ಯ ಶಿವಶರಣರನ್ನು ತನ್ನ ಕಾವ್ಯದ ನಾಯಕರನ್ನಾಗಿಸಿ ಅವರ ಭಕ್ತ ಜೀವನದ ಕಾಣಿಕೆಯನ್ನು ರಗಳೆಗಳ ಮೂಲಕ ತೋರ್ಪಡಿಸಿದ ಭಕ್ತಕವಿ, ಸಶಕ್ತಕವಿ ಹರಿಹರ. ರಾಜರ ಹೊಗಳಿಕೆಗೆ ತನ್ನ ಕಾವ್ಯ ಶಕ್ತಿಯನ್ನು ಮಾರಿಕೊಳ್ಳದೆ ಶಿವನಿಗೆ ತಮ್ಮನ್ನು ಸಮರ್ಪಿಸಿಕೊಂಡಿರುವ ಶಿವಶರಣರನ್ನು ಕುರಿತು ಸುಮಾರು 106 ರಗಳೆಗಳು ಈತನಿಂದ ರಚಿಸಲ್ಪಟ್ಟಿವೆ. ಹರಿಹರನ ರಚನೆ ರಗಳೆಗಳಷ್ಟೆ ಸೀಮಿತವಾಗಿಲ್ಲ. ಚಂಪೂಕಾವ್ಯ, ಅಷ್ಟಕ, ಶತಕ ಕೃತಿಗಳೂ ಸಹ ಆತನಿಂದ ಸೃಜಿಸಲ್ಪಟ್ಟಿವೆ. ಈ ಕಾವ್ಯಗಳು ಆತನ ಸಾಹಿತ್ಯ ರಚನೆಯ ಆರಂಭದಲ್ಲಿ ಸೃಷ್ಟಿಗೊಂಡವು.

ಹರಿಹರ ವಿರಚಿತ ಪಂಪಾಶತಕ ಮತ್ತು ರಕ್ಷಾಶತಕಗಳು ಭಕ್ತಿಯ ಮಹಾಪೂರವನ್ನೆ ಪ್ರವಹಿಸಿದ ಶತಕದ್ವಯಗಳು. ಚಂಪೂ, ರಗಳೆ, ಷಟ್ಪದಿಗಳಂತೆ ಶತಕವೂ ಕೂಡ ಸಾಹಿತ್ಯದ ಒಂದು ಪ್ರಕಾರ. ನೂರು ಪದ್ಯಗಳಿಂದ ಕೂಡಿರುವ ಶತಕ ಸಾಹಿತ್ಯವು ಕಂದ, ವೃತ್ತ ಷಟ್ಪದಿ, ಸಾಂಗತ್ಯ ಮೊದಲಾದ ಕಾವ್ಯ ಪ್ರಕಾರಗಳಿಂದ ರಚಿತವಾಗಿರುವುದಲ್ಲದೆ ಕೇವಲ ನೂರು ಪದ್ಯಗಳಿಗೆ ಸೀಮಿತವಾಗಿಲ್ಲ 128 ಪದ್ಯಗಳವರೆಗೂ ಅದರ ಸಂಖ್ಯೆ ಮುಂದುವರೆದಿದೆ ಎಂಬುದು ಗಮನಿಸಬೇಕಾದ ಅಂಶ. ಶತಕ ಸಾಹಿತ್ಯಕ್ಕೆ ನಿರ್ದಿಷ್ಟ ಕಥಾವಸ್ತುವಿನ ಅವಶ್ಯಕತೆಯಿಲ್ಲ. ಕವಿಯ ಭಾವ ಲಹರಿಯಿಂದ ಹೊರ ಹೊಮ್ಮಿದ ಪದ್ಯಗಳು ಒಂದು ವಿಷಯದ ಏಕ ಸೂತ್ರತೆಗೆ ಒಳಗಾಗಿರುತ್ತದಷ್ಟೆ. ಪ್ರಾಚೀನ ಕಾಲದ ಭಾವಗೀತೆಗಳೆಂದು ಹೆಸರಾದ ಶತಕ ಸಾಹಿತ್ಯದ ಮುಖ್ಯ ಲಕ್ಷಣ ಭಕ್ತಿ, ಜ್ಞಾನ, ವೈರಾಗ್ಯ, ತತ್ವ, ನೀತಿಗಳ ಪ್ರತಿಪಾದನೆ. ಕನ್ನಡ ಶತಕ ಸಾಹಿತ್ಯಕ್ಕೆ ಸಂಸ್ಕೃತ ಶತಕ ಸಾಹಿತ್ಯವೇ ಪ್ರೇರಣೆ. ನಾಗವರ್ಮಾಚಾರ್ಯನ (ಸುಮಾರು. 1071) 'ಚಂದ್ರ ಚೂಡಾಮಣಿ ಶತಕ' ಕನ್ನಡದ ಮೊಟ್ಟ ಮೊದಲ ಶತಕ ಕೃತಿ. ಆನಂತರ ಕೊಂಡುಗುಳಿ ಕೇಶಿರಾಜನ (ಸುಮಾರು.1160) ಷಡಕ್ಷರ ಕಂದ ಶತಕದ ಲಕ್ಷಣ ಹೊಂದಿರುವ ಕೃತಿ ಎಂದು ಹೇಳಲಾಗಿದೆ. ಆದರೆ ಕನ್ನಡ ಶತಕ ಸಾಹಿತ್ಯಕ್ಕೆ ಹರಿಹರನ ಕೊಡುಗೆ ಅನನ್ಯ ಹಾಗೂ ಅಸಾದೃಶವಾದುದು. ಆತನ ಶತಕದ್ವಯಗಳಾದ ಪಂಪಾಶತಕ ಮತ್ತು ರಕ್ಷಾ ಶತಕಗಳು ಅತ್ಯುನ್ನತವಾದ ಕಾವ್ಯಗುಣಗಳಿಂದ ಮೇಳೈಸಿ ಸಹೃದಯರ ಮನಸೆಳೆಯುವಲ್ಲಿ ಯಶಸ್ವಿಯಾಗಿವೆ. ಭಕ್ತಿಯ ಬೋಧನೆಯ ವಿಷಯದಲ್ಲಿ ವಚನಗಳು ವಹಿಸಿದ ಪಾತ್ರವನ್ನೆ ಹರಿಹರನ ಶತಕಗಳು ವಹಿಸಿವೆ. ಅವನ ಮನದಾಳದ ಭಕ್ತಿ ಭಾವಗೀತೆಯಾಗಿ ಹೊರಹೊಮ್ಮಿದೆ. ಹರಿಹರನ ಶಕ್ತಿ ಅಡಗಿರುವುದೇ ಭಕ್ತಿಯಲ್ಲಿ ಹಾಗಾಗಿ ಆತ ಭಕ್ತಕವಿ ಎಂಬ ಗೌರವಕ್ಕೆ

ಪಾತ್ರನಾಗಿರುವುದು. ಹರಿಹರನ ಶತಕದ್ವಯಗಳು ವೃತ್ತಗಳಲ್ಲಿ ರಚಿತವಾಗಿದ್ದು ಇವುಗಳಲ್ಲಿ ಖ್ಯಾತ ಕರ್ನಾಟಕ ವೃತ್ತಗಳನ್ನಷ್ಟೆ ಪ್ರಯೋಗಿಸಿ ಆ ಮೂಲಕ ಮುಂದಿನ ಶತಕ ರಚನಕಾರರಿಗೆ ಒಂದು ಮಾರ್ಗವನ್ನು ಹಾಕಿಕೊಟ್ಟಿದ್ದಾನೆ.

ರಕ್ಷಾ ಶತಕವು 101 ಸಮ ವೃತ್ತಗಳಿಂದ ಕೂಡಿದ್ದು 17 ಸ್ರಗ್ಧರಾ ಹಾಗೂ 84 ಮಹಾಸ್ರಗ್ಧರಾ ವೃತ್ತಗಳ ಸಂಗಮವಾಗಿದೆ. ಈ ವೃತ್ತಗಳು ಭಕ್ತಿಯನ್ನು ಅಭಿವ್ಯಕ್ತಿಸಲು ಹೇಳಿಮಾಡಿಸಿದ ಮಟ್ಟುಗಳು. ಪ್ರತಿ ಪದ್ಯವು 'ಪಂಪಾಪುರದರಸ ವಿರೂಪಾಕ್ಷ ರಕ್ಷಿಪುದೆನ್ನಂ' ಎಂದು ಅಂತ್ಯಗೊಳ್ಳುತ್ತವೆ. ಶತಕದ ಮತ್ತೊಂದು ಲಕ್ಷಣವಿದು. ವಚನಗಳ ಅಂತ್ಯದಲ್ಲಿ ಕಂಡುಬರುವ ಅಂಕಿತದಂತೆ ಶತಕದ ಕೊನೆಯಲ್ಲಿ ಆರಾಧ್ಯ ದೈವದ ಹೆಸರು ಬರುತ್ತದೆ. ಒಬ್ಬನೆ ಕವಿ ಎರಡು ಮೂರು ಶತಕ ಕೃತಿಗಳನ್ನು ರಚಿಸಿದ್ದರೆ ಆ ಶತಕಗಳ ಅಂಕಿತ ವಿಭಿನ್ನವಾಗಿರುತ್ತವೆ. ಹರಿಹರನೇ ತನ್ನ ಪಂಪಾಶತಕಕ್ಕೆ ಹಂಪೆಯಾಳ್ದನೇ, ವಿರೂಪಾಕ್ಷಲಿಂಗ ಎಂಬ ಅಂಕಿತ ನೀಡಿರುವುದನ್ನು ಕಾಣುತ್ತೇವೆ. ರತ್ನಾಕರವರ್ಣಿಯ ರತ್ನಾಕರಾಧೀಶ್ವರ ಶತಕವು 'ರತ್ನಾಕರಾಧೀಶ್ವರ' ಎಂದೂ, ಅಪರಾಜಿತೇಶ್ವರ ಶತಕವು 'ಅಪರಾಜಿತೇಶ್ವರ' ಎಂಬ ಅಂಕಿತದಿಂದ ಮುಕ್ತಾಯಗೊಳ್ಳುತ್ತವೆ. ಹಾಗೆಯೇ ಮೊಗ್ಗೆಯ ಮಾಯಿದೇವನ ಶಿವಾಧವ ಶತಕದಲ್ಲಿ 'ಶಿವಾಧವ' ಎಂದೂ ಐಪುರೀಶ್ವರ ಶತಕದಲ್ಲಿ 'ಐಪುರೀಶ್ವರ' ಎಂದೂ, ಮಹದೈಪುರೀಶ್ವರ ಶತಕದಲ್ಲಿ 'ಮಹದೈಪುರೀಶ್ವರ' ಎಂದೂ ತಮ್ಮ ಇಷ್ಟ ದೈವದ ಪರ್ಯಾಯ ನಾಮಗಳನ್ನು ವಿಭಿನ್ನ ಅಂಕಿತಗಳಾಗಿ ಪ್ರಯೋಗಿಸಿದ್ದಾರೆ. ಈ ರೀತಿ ಒಂದೊಂದು ಶತಕಕ್ಕೆ ಒಂದೊಂದು ಅಂಕಿತವನ್ನಿಡಲು ಮುಖ್ಯ ಕಾರಣ ಒಬ್ಬನೇ ಕವಿಯ ಶತಕ ಕೃತಿಗಳ ನಡುವೆ ಉಂಟಾಗುವ ಗೊಂದಲವನ್ನು ದೂರೀಕರಿಸುವುದರ ಮೂಲಕ ಪ್ರತ್ಯೇಕತೆಯನ್ನು ಕಾಯ್ದುಕೊಂಡಿವೆ ಎಂದೆನ್ನಬಹುದು.

ಹರಿಹರನ ರಕ್ಷಾಶತಕವು ಆತ್ಮಕಥನದಂತೆ ಮೂಡಿ ಬಂದಿದೆ. ಇಲ್ಲಿ ಆತ್ಮನು ಹಿಂದೆ ತಾನು ಏನಾಗಿದ್ದೆ? ತನಗೀ ಮಾನವ ಜನ್ಮ ಏಕೆ ಲಭಿಸಿತು? ಸಂಸಾರದ ಸುಳಿಗೆ ಹೇಗೆ ಸಿಲುಕಿದೆ? ಅರಿಷಡ್ವರ್ಗಗಳು ಎಲ್ಲಿಂದ ಬಂದು ನಮ್ಮನ್ನು ಬಾಧಿಸುತ್ತಿವೆ? ಮುಂದೆ ತಾನು ಏನಾಗುತ್ತೇನೆ? ಎಂಬ ಪ್ರಶ್ನೆಗಳು ಆತನ ಮನೋವಲಯದಲ್ಲಿ ಮೂಡಿ ಅವುಗಳಿಗೆ ಈ ಕೃತಿಯಲ್ಲಿ ಉತ್ತರವೀಯುತ್ತ ಅಜ್ಞಾನ, ಅಂಧಕಾರದಲ್ಲಿ ಮುಳುಗಿರುವ ಆತ್ಮನಿಗೆ ಜ್ಞಾನದ ಜ್ಯೋತಿಯನ್ನು ದರ್ಶಿಸುವ ಮೂಲಕ ಕತ್ತಲೆಯಿಂದ ಬೆಳಕಿನೆಡೆಗೆ, ಅಜ್ಞಾನದಿಂದ ಜ್ಞಾನದೆಡೆಗೆ ಕರೆದುಕೊಂಡು ಸಾಗುತ್ತಾನೆ. ಒಟ್ಟಾರೆ ಶಿವ ಕಾರುಣ್ಯದಿಂದಲೇ ಚರಾ ಚರಾ ಜೀವಿಗಳ ಜನನ. ಹರನ ದಿವ್ಯಶಕ್ತಿ ವಿಶ್ವವ್ಯಾಪಕ. ಹಾಗಾಗಿ ಆ ವಿಶ್ವಾತೀತನ ಆರಾಧನೆ ಮಾಡುತ್ತಾ, ಆತನನ್ನು ಸ್ಮರಿಸುತ್ತಾ ಇರುವುದು ಮಾನವನ ಆದ್ಯ ಕರ್ತವ್ಯ. ಆಗ ಮಾತ್ರ ಶಿವನ ರಕ್ಷೆ ದೊರಕಲು ಸಾಧ್ಯ ಎಂಬುದು ರಕ್ಷಾಶತಕದಿಂದ ವೇದ್ಯವಾಗುವ ವಿಚಾರ. ರಕ್ಷಾ ಶತಕದ ನೂರೊಂದು ವೃತ್ತ ಪದ್ಯಗಳನ್ನು ವಿದ್ವಾಂಸರು 2 ಭಾಗಗಳಾಗಿ ವಿಂಗಡಿಸಿ ಪೂವಾರ್ಧವನ್ನು ಪ್ರವೃತ್ತಿ ಮಾರ್ಗ ಎಂತಲೂ, ಉತ್ತರಾರ್ಧವನ್ನು ನಿವೃತ್ತಿಮಾರ್ಗ ಎಂತಲೂ ಕರೆದಿರುವುದು ಸರಿಯಷ್ಟೆ. ನೂರೊಂದು ವೃತ್ತಗಳನ್ನು ಓದುತ್ತಾ ಹೋದಂತೆ ಪಂಪಾಪುರದರಸನೆ ನಮ್ಮ ಚಿತ್ತದಲ್ಲಿ ಬಂದು ಶಾಶ್ವತವಾಗಿ ನೆಲೆಯೂರಿದ ಭಾವ ಉಂಟಾಗುತ್ತದೆ. ಭಕ್ತಿರಸದ

ಕಡಲಲ್ಲಿ ಈಜಾಡುವ ಅನುಭವವಾಗುತ್ತದೆ. ಹರಿಹರ ವಿರೂಪಾಕ್ಷನನ್ನು ಆತ್ಮ ರಕ್ಷಣೆಗಾಗಿ ಬೇಡುವ ರೀತಿ ಶತಕ ಪ್ರಾರಂಭದಲ್ಲೆ ವಿಧಿತವಾಗುತ್ತದೆ.

'ತಿರುಗುತ್ತೆಂಬತ್ತು ನಾಲ್ಕುಂ ದಶಶತಶತಜನ್ಮಂಗಳೊಳ್ ಪಟ್ಟ ನಿಮ್ಮೊಂ
ದಿರವಂತಿಂತುಟೆಂದೇನುಮನರಿಯದೆ ಮಣ್ಣಾಗಿ ಕಲ್ಲಾಗುತುಂ ದು
ರ್ಧರಗುಲ್ಮಂ ಭೂರಿಭೂಜಂ ಪುಳು ಖಗ ಮೃಗವಾಗುತ್ತುಮೆಂತಕ್ಕೆ ಬಂದೆಂ
ನರಜನ್ಮಕ್ಕಯ್ಯ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ' (ರ.ಶ.ಪದ್ಯ-2)

34 ಲಕ್ಷ ಜನ್ಮಗಳಲ್ಲಿ ಒಡಲು ಸಂಭವಿಸಿದರೂ ಹರನೇ ನಿಮ್ಮ ನಿಲುವನ್ನರಿಯದೆ, ನಿಮ್ಮ ಕಾರುಣ್ಯದ ರಕ್ಷೆಯನ್ನರಿಯದೆ ಮಣ್ಣಾಗಿ, ಕಲ್ಲಾಗಿ, ಗಿಡಗಂಟಿಯಾಗಿ, ಹೆಮ್ಮರವಾಗಿ, ಹುಳು, ಪಕ್ಷಿ, ಪ್ರಾಣಿಗಳಾಗಿ ಕೊನೆಗೆ ನರಜನ್ಮಕ್ಕೆ ಬಂದಿದ್ದರೂ ಜೀವನದ ಜಂಜಾಟಕ್ಕೆ ಬಳಲಿ ಬೆಂಡಾಗಿದ್ದರೂ ನಿನ್ನ ಕಾಣುವ ತವಕ ನನ್ನಲ್ಲಿ ಮೂಡಲಿಲ್ಲ, ಆದರೀಗ ನಿಮ್ಮ ಕಾಣುವ, ದರ್ಶಿಸುವ ಹಂಬಲ, ತವಕ ನೂರ್ಮಡಿಯಾಗುತ್ತಿದೆ. ಕರುಣೆಯಿತ್ತು ಅನುಗ್ರಹಿಸು ತಂದೆ ವಿರೂಪಾಕ್ಷಾ ಎಂದು ನಿವೇದಿಸುವ ಆತನ ಹಂಬಲ ಭಕ್ತಿಯ ಪರಾಕಾಷ್ಠೆಯ ಪ್ರತೀಕ ಎಂಬುದಾಗಿ ಗುರುತಿಸಬಹುದು.

ಜನನ ಪೂರ್ವದಲ್ಲಿಯೇ ತಾಯಿ ಗರ್ಭಾಂಡದಲ್ಲಿ ರಕ್ತ, ಮಾಂಸ, ಜಠರ, ಮಲಮೂತ್ರದಲ್ಲಿ ಸಿಕ್ಕು ಹೊರಳುತ್ತಾ ಹುಟ್ಟುವಾಗಲೇ ಸಾವಿನ ನೋವು ಅನುಭವಿಸಿ ಬರುವ ಮಗು ಬಾಲ್ಯದಲ್ಲಿ ತಿಳುವಳಿಕೆ ಇಲ್ಲದೆ 'ಮಲದಿಂ, ಮೂತ್ರದಿಂ, ಶ್ಲೇಷದಿಂ, ತೋಯ್ದು' ಹೊರಳುತ್ತದೆ. ಯೌವನದಲ್ಲಿ ಮನೋವಿಕಳತೆಯಿಂದ ಸ್ತ್ರೀಲೋಲುಪತೆಗೆ ಒಳಗಾಗಿ 'ಶ್ವಾನಂಗೆ, ಹಂದಿಗೆ, ಕಪಿಗೆಣೆಯಾಗಿರ್ದು' ಪ್ರಾಣಿಗಳಂತೆ ವರ್ತಿಸುತ್ತದೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಅರಿಷಡ್ವರ್ಗಗಳ ಬಲೆಗೆ ಸಿಲುಕಿ ಮನೋವಿಕಾರಗಳಿಂದ ಬಳಲುತ್ತದೆ. ಮಾನವನ ಮನ 'ಪರರೈಶ್ವರ್ಯಕ್ಕಸೂಯೆಗೊಳುತ, ಪರರ ಬಲ್ಪಿಂಗೆಸಂತಾಪಿಸುತ' ಇರುವ ಸ್ವಾರ್ಥ ಸಾಧನೆಯ ಪ್ರವೃತ್ತಿಯ ನಡೆಯನ್ನು ಟೀಕಿಸುತ್ತಾ

'ಮನವೆನ್ನಂ ದುರ್ವಿಕಾರಕ್ಕೆಳೆದಪುದು ಮನಂಮಾನಮಂ ನುರ್ಗಿದತ್'

'ಮನವೀ ಮಾಯೆಯಂ ಬಿಟ್ಟು ನಿಮ್ಮ ನೆನೆಯಲ್ ತಾನೀಯದಯ್ಯೋ ಶಿವನೆ' (ರ.ಶ.ಪದ್ಯ.12) ಎಂದು ಪರಿತಪಿಸುವ ಮೂಲಕ ಮನಸ್ಸೆಂಬ ಮರ್ಕಟದ ಚಿತ್ತ ವಿಕಾರತೆಯನ್ನು ತೆರದು ತೋರುತ್ತಾ, ಮಾನವನಿಂದು ತನ್ನ ಆಸೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಮಾನಾಪಮಾನಗಳಿಗಂಜದೆ ಎಂತಹ ಹೇಯ ಕೃತ್ಯಕ್ಕಾದರೂ ಸರಿ ತನ್ನನ್ನು ಒಡ್ಡಿಕೊಳ್ಳುತ್ತಿರುವುದು ಸ್ಮರಣೆಗೆ ಬರದೆ ಇರಲಾರದು. ಅಲ್ಲಮಪ್ರಭುಗಳು ಹೇಳುವಂತೆ ಹೆಣ್ಣು, ಹೊನ್ನು, ಮಣ್ಣು, ನಾವಂದುಕೊಂಡಂತೆ ಮಾಯೆಯಲ್ಲ 'ಮನದ ಮುಂದಣ ಆಸೆಯೇ ಮಾಯೆ' ಎಂಬ ಮಾತು ನಮ್ಮ ಮನದಲ್ಲಿ ಮಾರ್ಧನಿಗೊಳುತ್ತದೆ. ಮನಸ್ಸು ಆಸೆಯನ್ನು ತೊರೆದು ಶಿವನ ಸ್ಮರಣೆಗೆ ತನ್ನನ್ನು ಬಿಟ್ಟುಕೊಡುತ್ತಿಲ್ಲವೆಂಬ ಭಾವ ಇಲ್ಲಿ ಮೂಡುವುದರೊಂದಿಗೆ ಆ ಮಾಯೆಯಿಂದ ಬಿಡುಗಡೆ ಹೊಂದಬೇಕೆಂಬ ಹಂಬಲವೂ ಅವನಲ್ಲಿ ವ್ಯಕ್ತಗೊಂಡಿದೆ.

'ಸಂಸಾರ ಸಂಗಕ್ಕರಿಯದೆರಗಿದೆಂ ಮಳ್ಗಿದೆಂ ಮಾರುವೋದೆಂ'(ರ.ಶ.ಪದ್ಯ.25) ಎಂಬಲ್ಲಿ ಮನೆ, ಮಕ್ಕಳು, ತಂದೆ, ತಾಯಿ, ಪತ್ನಿ, ಧನ, ಧಾನ್ಯ, ಐಶ್ವರ್ಯಗಳಿಗಾಗಿ ಮೋಹಗೊಂಡು ಮರುಗಿ ಕೊರಗಿದ ಹರಿಹರನಿಗೀಗ ಸಂಸಾರ ಅಶಾಶ್ವತವೆಂಬ ಅರಿವು ಮೂಡಿ ಪಂಪಾಪುರದರಸನ ರಕ್ಷೆಗಾಗಿ ಹಂಬಲಿಸುತ್ತಿದ್ದಾನೆ. ಅಲ್ಲದೆ 'ಕಾಮ, ಮೋಹ, ಕೋಪ, ದುರ್ಮೋಹಗಳಿಂದ ಪೊಳ್ತು ಪೋಗುತಿದೆ' ತನ್ನ ರಕ್ಷಿಸು ಎಂದು ಯಾಚಿಸುವ ಮೂಲಕ ಅರಿಷಡ್ವರ್ಗಗಳ ಮೋಹದ ಬಲೆಯಿಂದ ಹೊರಬರುವ ಭಗವಂತನ ಕಡೆಗೆ ತನ್ನ ಚಿತ್ತ ತಿರುಗಿರುವ ಅಂಶದ ಕಡೆಗೆ ಸೆಳೆಯುತ್ತಲೇ, ಶಿವನ ಸೃಷ್ಟಿ ಕಾರ್ಯದ ಹಿಂದಿನ ಶಕ್ತಿಯ ಮೇಲೆ ಅವನಿಗಿದ್ದ ನಂಬಿಕೆಯನ್ನು ತೋರುತ್ತಾನೆ. ಕಾವ್ಯ ಮುಂದುವರೆದಂತೆ ಆತನ ಇಹದ ವ್ಯಾಮೋಹ ಕಳಚಿ ಪರಮಾತ್ಮನ ಸಾನಿಧ್ಯವೇ ಶ್ರೇಷ್ಟವಾಗುತ್ತಾ ಹೋಗುತ್ತದೆ.'ಗುರುವಾರ್ ನೀಂ, ಜನನಿ–ಜನಕರಾರ್ ನೀಂ, ವಂದ್ಯರಾರ್ ನೀಂ, ಎನಗತಿ ಹಿತರಾರ್ ನೀಂ, ನಿನ್ನಿಂ ಪೆರರಾರ್'(ರ.ಶ.ಪದ್ಯ.44) ಎಂಬಲ್ಲಿ ಶಿವನುಳಿದು ಬೇರೆ ಗತಿ ಮತಿ ತನಗಿಲ್ಲ, ನೀನೆ ನನ್ನ ಗುರು, ನಿನ್ನ ಶಿಷ್ಯನ ಕೈಹಿಡಿದು ನಡೆಸೆನ್ನುವ ವಿನಯತೆ ಕಾಣುತ್ತದೆ.

'ಎನ್ನಾಯುವೆನ್ನೆಲ್ಲಮುಂನಿಮ್ಮಡಿಗಳ್,ಸರ್ವಸ್ವಮುಂನಿಮ್ಮಡಿಗಳ್'(ರ.ಶ.ಪದ್ಯ.59)

'ನಿಮಗೆನ್ನಂ ಮಾರುಗೊಟ್ಟೆಂ ಪುರಹರ ನಿಮಗೆನ್ನಂ ಸದಾ ತೋಳ್ತುಗೊಟ್ಟೆಂ' (ರ.ಶ.ಪದ್ಯ.78)

'ಬಿಡೆನೀಶಾ ನಿಮ್ಮ ಪಾದಾಬ್ಜಮನೆಲೆಲೆ ಬಿಡೆಂ ಸೀಳ್ದೊಡಂ ಪೋಳ್ದೊಡಂ' (ರ.ಶ.ಪದ್ಯ.98)

'ಕರ್ತಾರಂ ನೀನೆ, ಭರ್ತಾರಂ ನೀನೆ, ಹರ್ತಾರಂ ನೀನೆ'(ರ.ಶ.ಪದ್ಯ.99) ಎಂಬ ಶತಕದ ಉತ್ತರಾರ್ಧದ ಸಾಲುಗಳು ಹರನಿಗೆ ಹರಿಹರನ ಸಮರ್ಪಣಾ ಭಾವವನ್ನು ಸೂಚಿಸುತ್ತವೆ.

ಪಂಪಾಪುರದರಸನ ನಾಮಸ್ಮರಣೆಗೆ ಶತಕ ಮೀಸಲಾಗಿದೆ. ಶತಕ ಓದಿ ಮುಗಿದರೂ 'ಪಂಪಾಪುರದರಸ ವಿರೂಪಾಕ್ಷ ರಕ್ಷಿಪುದೆನ್ನಂ' ಎಂಬ ಸಾಲು ಮನಸ್ಸಿನಲ್ಲಿ ಮಾರ್ಧನಿಗೊಳ್ಳುತ್ತಲೆ ಇರುತ್ತದೆ. ಹರಿಹರ ವಿರೂಪಾಕ್ಷನನ್ನು ಅನವರತವೂ ರಕ್ಷಿಸು ಎಂದು ನಿವೇದಿಸಿರುವ ಆತನ ಹಂಬಲ ಮಾನವ ಕುಲದ ಹಂಬಲವಾಗಿ ತೋರುತ್ತದೆ. ಅಪರಿಪೂರ್ಣನಾದ ಆತ್ಮ ನಾನ ಜನ್ಮಗಳಲ್ಲಿ ಜನಿಸಿ ಮರಣಿಸಿ ಶಿವನ ಮೊರೆಹೊಕ್ಕು ಪರಿಪೂರ್ಣನಾಗುವ ಹಂಬಲ ರಕ್ಷಾಶತಕದಲ್ಲಿ ಕಾಣಬರುತ್ತವೆ. ಹರಿಹರ ತನ್ನ ಬದುಕಿನ ಇತಿವೃತ್ತವನ್ನು ಹೇಳುತ್ತಾ ಹೋಗುವಂತೆ ಕೃತಿ ರಚಿತವಾಗಿದ್ದರೂ ಇಡೀ ಮಾನವ ಕುಲಕ್ಕೆ ಇದು ಅನ್ವಯಿಸುತ್ತದೆ. ಮೋಕ್ಷ ಸಾಧನೆಗೆ ಶಿವಧ್ಯಾನವೇ ದಾರಿದೀಪ. ಶಿವಧ್ಯಾನಕ್ಕಾಗಿ, ಸ್ಮರಣೆಗಾಗಿ ಹರಿಹರನ ಆತ್ಮ ಸದಾ ಹಂಬಲಿಸುತ್ತದೆ. ಅದು ಇತರರ ಮೇಲೂ ಆಗಬೇಕೆಂಬ ಬಯಕೆ ಹರಿಹರನಲ್ಲಿ ಇದ್ದಂತಿದೆ. ಹಾಗಾಗಿಯೇ ಅವನ ಭಕ್ತಿ ಪರಾಕಾಷ್ಠೆಗೆ ತಲುಪಿದಂತೆ ಕಂಡುಬರುತ್ತದೆ.

103 ಖ್ಯಾತ ಕರ್ನಾಟಕ ವೃತ್ತಗಳಿಂದ ಕೂಡಿದ ಪಂಪಾಶತಕವು 32 ಚಂಪಕಮಾಲೆ, 13 ಉತ್ಪಲಮಾಲೆ, 32 ಮತ್ತೇಭ ವಿಕ್ರೀಡಿತ, 8 ಶಾರ್ದೂಲ ವಿಕ್ರೀಡಿತ, 2 ಸ್ರಗ್ಧರಾ ಹಾಗೂ 16 ಮಹಾಸ್ರಗ್ಧರಾ ವೃತ್ತಗಳ ಸಮಾವೇಶವೇ ಆಗಿದೆ. ಕೃತಿಯ ಪಾದಾಂತ್ಯವು 'ಹಂಪೆಯಾಳ್ದನೇ' 'ವಿರೂಪಾಕ್ಷ ಲಿಂಗ' ಎಂಬ ಅಂಕಿತದಿಂದಾಗುತ್ತದೆ. ವಿರೂಪಾಕ್ಷನ ಸ್ತುತಿಯಿಂದ ಆರಂಭವಾಗುವ ಕೃತಿ ಮುಂದೆ ಆತನ ನಾಮ ಸ್ಮರಣೆಯ ವ್ಯಾಪಕತೆಗೊಳಗಾಗುತ್ತದೆ. ಹಂಪೆಯಾಳ್ದನನನ್ನು ವಿರೂಪಾಕ್ಷ ನಾಮದಿಂದ ಬಗೆ ಬಗೆಯಾಗಿ ಬಣ್ಣಿಸಿರುವ ಹರಿಹರನಿಗೆ ವಿರೂಪಾಕ್ಷನೇ ಆರಾಧ್ಯ ದೈವ. ಹರನ ಧ್ಯಾನ, ಪೂಜೆ, ಸ್ಮರಣೆಗಳೇ ಆತನಿಗೆ ಆಧಾರ. ಸಂಸಾರ ಬಂಧನ ಬಿಡಿಸಿ ನಿಜ ಸುಖವನ್ನು ನೀಡುವ ಮುರಹರನಿಗೆ ಹರಿಹರ ತನ್ನ ಸರ್ವಸ್ವವನ್ನೆ ಮೀಸಲಿರಿಸಿದ್ದಾನೆ. ಹರಿಹರನ ಅವಿರಳ ಭಕ್ತಿ ಸುಧೆ ಕಾವ್ಯದಲ್ಲಿ ಪ್ರಕಟಗೊಳ್ಳುತ್ತಾ ಹೋಗುತ್ತದೆ. ವಿರೂಪಾಕ್ಷನನ್ನು 'ನೋಡದ ಕಣ್ಗಳೇಕೆ, ಸಲೆ ಕೇಳದ ಕರ್ಣಮದೇಕೆ, ಭಕ್ತಿಯಿಂಪಾಡದ ಬಾಯದೇಕೆ, ಪೆಸರ್ಗೊಳ್ಳದ ಜಿಹ್ವೆಯದೇಕೆ'(ಪಂ.ಶ.ಪದ್ಯ.8) ಎಂದು ತನ್ನ ಪಂಚೇಂದ್ರೀಯಗಳು ಆತನ ವರ್ಣನೆಗೆ, ಅರ್ಚನೆಗೆ, ಧ್ಯಾನಕ್ಕೆ, ಸ್ಮರಣೆಗೆ ಮೀಸಲು ಎಂದು ಸಾರಿ ಹೇಳುತ್ತಾನೆ. 'ನಡೆತಂದೆನ್ನಯ ಕಣ್ಗಳಲ್ಲಿರು... ಬಿಡದಂತೆನ್ನಯ ಜಿಹ್ವೆಯಲ್ಲಿರು...ಎದೆಗೊಂಡೆನ್ನಯ ಚಿತ್ತದಲ್ಲಿರು ವಿರೂಪಾಕ್ಷಾ'(ಪಂ.ಶ.ಪದ್ಯ.7) ಎಂದು ಹರನನ್ನು ಆರಾಧಿಸುವ ಪರಿ ವಚನಕಾರರ ಶರಣಸತಿ–ಲಿಂಗಪತಿ ಭಾವವನ್ನು ಮನದಲ್ಲಿ ಮೂಡಿಸುತ್ತದೆ. ಶಿವನುಳಿದು ಅನ್ಯರಿಲ್ಲ, ಶಿವ ಭಕ್ತಿಯುಳಿದು ಪರವಿಲ್ಲ, ಶಿವನೆ ಸಕಲವೂ, ಶಿವನೇ ಸರ್ವಸ್ವವೂ, ತನು–ಮನಗಳಲ್ಲೆಲ್ಲಾ ಮುರಹರನೇ ತುಂಬಿ ತುಳುಕುತ್ತಾನೆ.

ಕಾವ್ಯದಲ್ಲಿ ಶಿವನ ಪ್ರತಾಪಗಳನ್ನು ಸ್ಮರಿಸುತ್ತಾ ಮನ್ಮಥನ ಮೇಲೆ ಕಣ್ಬಿಟ್ಟವನು, ದಕ್ಷನ ಯಜ್ಞವ ಸುಟ್ಟವನು, ಅಂಧಕಾಸುರನ ಮೆಟ್ಟಿದವನು, ಗಜಾಸುರನ ಸೀಳಿದವನು, ನಾಟ್ಯಾಭಿರಂಗನೂ, ವೇದಕ್ಕುನ್ನತನು, ಹರಿ ಬ್ರಹ್ಮಾದಿಗಳು ಮಾಡುವ ಸಂವಾದದಲ್ಲಿ ಅಗ್ಗಳನಾದವನು, ಶರಣರ, ಭಕ್ತರ ರಕ್ಷಿಪ ತಾಯ್ತುಂದೆ ಎಂದು ಆತನ ವಿವಿಧ ನಾಮಾಂಕಿತವನ್ನು ಕೊಂಡಾಡುತ್ತಾ ಆತನ ಕೃಪೆಯನ್ನು, ಶಕ್ತಿಯನ್ನು ಹೊಗಳುತ್ತಾ ವಿರೂಪಾಕ್ಷನ ನಾಮ ಸ್ಮರಣೆಯಲ್ಲಿ ಹರಿಹರ ಲೀನನಾಗುತ್ತಾನೆ. ಅಷ್ಟೇ ಅಲ್ಲದೆ ಭಕ್ತಿ ಹೇಗಿರಬೇಕೆಂದು ತನ್ನ ನಡೆಯ ಮೂಲಕ ತೋರಿದಂತೆ ಭಾಸವಾಗುವುದೇ ಇಲ್ಲಿ.

'ಶರಣಂ ಸಂಸಾರಿಯೇ ಮಾಣ್ ಮುಸಿ ಮುಸಿ ಶರಣಂ ಕಾಮಿಯೇ ಪೇಳಲೆಂತುಂ

ಶರಣಂ ತಾಂ ಕ್ರೋಧಿಯೇ ಸಲ್ಲದು ತೆಗೆ ಶರಣಂ ಮರ್ತ್ಯನೇಅಲ್ಲವೈ'(ಪಂ.ಶ.ಪದ್ಯ.43) ಎಂಬ ಪದ್ಯದಲ್ಲಿ ಶರಣ ಮರ್ತ್ಯನೇ ಅಲ್ಲ, ಮಹಾನುಭಾವ ಸಾಕ್ಷಾತ್ ವಿರೂಪಾಕ್ಷನೆಂಬ ಭಾವ ಅಭಿವ್ಯಕ್ತಗೊಂಡಿದೆ. ಭಕ್ತಿಯ ಅನನ್ಯತೆ, ನಿಬಿಡತೆ ಪ್ರಾಯಶಃ ಹರಿಹರನಿಗೆ ಕಂಡಿರುವುದು ಶಿವ ಶರಣರಲ್ಲಿ. ಹಾಗಾಗಿ ಆತ ನಂಬಿಯನ್ನು, ಗುಂಡಯ್ಯನನ್ನು, ದಾಸಿಮಯ್ಯನನ್ನು, ಸಿರಿಯಾಳನನ್ನು, ಚೇರಮಾಂಕನನ್ನು, ಕೊಳೂರ ಕೊಡಗೂಸನ್ನು, ಬೇಡರಕಣ್ಣಪ್ಪನ ಪೂಜೆಯನ್ನು ಅವರ ಭಕ್ತಿಯ ಪಾರಮ್ಯವನ್ನು ಸ್ಮರಿಸುತ್ತಾನೆ. ಈ ಶರಣರು ಹರಿಹರನ ಮೇಲೆ ಎಂತಹ ಪ್ರಭಾವ ಬೀರಿದವರೆಂದರೆ ವಿಶ್ವಾತೀತನಾದ ವಿಶ್ವೇಶ್ವರನ ಕೃಪೆಗೆ

ಪಾತ್ರನಾಗಲು ಭಕ್ತಿಯೊಂದೆ ಮಾರ್ಗ. ಆ ಮೂಲಕ ಮುಕ್ತಿಯ ಕಡೆಗೆ ಹೆಜ್ಜೆ ಇಡಬಹುದೆಂಬ ಭಕ್ತಿಯ ಅನನ್ಯತೆ ವೇದ್ಯವಾಗುವುದೇ ಪ್ರಾಯಶ: ಶಿವಶರಣರಿಂದ.

'ಪೋಗೆನೆ ಪೋಪ ಬಾರೆಲವ್ರೊ ಬಾರೆನೆ ಜೀಯ ಹಸಾದವೆಂದು

ಬೆಳ್ಳಾಗುತೆ ಬರ್ಪ ಮಾಣೆಲವ್ರೊ ಸುಮ್ಮನಿರೆಂದೊಡೆ ಸುಮ್ಮನಿರ್ಪ'(ಪಂ.ಶ.ಪದ್ಯ.88)

ಧೋರಣೆ ಹರಿಹರನದಲ್ಲ. ಅರಸೊತ್ತಿಗೆಯನ್ನು ದಿಕ್ಕರಿಸಿ ನರನ ಸೇವೆಗಿಂತ ಹರನ ಸೇವೆಯೇ ಶ್ರೇಷ್ಠವೆಂದು ಹಂಪೆಯ ವಿರೂಪಾಕ್ಷನಿಗೆ ಶರಣಾದ ಭಕ್ತ ಶ್ರೇಷ್ಠ ಹರಿಹರ. ಆತ ನರಸಿಂಹ ಬಲ್ಲಾಳನಲ್ಲಿ ಕೆಲಕಾಲ ಕರಣಿಕ ವೃತ್ತಿಯಲ್ಲಿದ್ದು ಅದನ್ನು ದಿಕ್ಕರಿಸಿ ತನ್ನ ಮನಸ್ಸು ತುಡಿಯುತ್ತಿದ್ದ ವಿರೂಪಾಕ್ಷನ ಸೇವೆಗೆ ಬಂದ ವಿಚಾರವನ್ನಿಲ್ಲಿ ಸ್ಮರಿಸಬಹುದು.

'ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆಯಕ್ಕಟಾ

ತನತನಗಿಂದ್ರ–ಚಂದ್ರ–ರವಿ – ಕರ್ಣ–ದಧೀಚಿ – ಬಲೀಂದ್ರನೆಂದು ಮೇಣ್

ಅನವರತಂ ಪೊಗಳ್ದು ಕೆಡಬೇಡಲೆ ಮಾನವ ನೀನಹರ್ನಿಶಂ

ನೆನೆ ಪೊಗಳರ್ಚಿಸೆಮ್ಮ ಕಡು ಸೊಂಪಿನ ಪೆಂಪಿನ ಹಂಪೆಯಾಳ್ದನಂ'(ಪಂ.ಶ.ಪದ್ಯ.82)

ಈ ಪದ್ಯದಲ್ಲಿ ಹರಿಹರನ ಕಾವ್ಯಧೋರಣೆ ಸಶಕ್ತವಾಗಿ ಚಿತ್ರಿತವಾಗಿದೆ. ಸಾವ ಕೆಡುವ ಮಾನವರನ್ನು, ಅಧಿಕಾರದಲ್ಲಿರುವವರನ್ನು ಹೊಟ್ಟೆ ಪಾಡಿಗಾಗಿ ಹೊಗಳಿ ಬರೆಯುವುದು ಹೀನಕಾರ್ಯ. ಲೋಕ ಕಲ್ಯಾಣಕ್ಕೆ ಕಾರಣೀಕರ್ಥನಾದ ಹರನನ್ನು, ಆತನ ಭಕ್ತರನ್ನು ಕುರಿತು ಕಾವ್ಯ ಬರೆಯಬೇಕೆಂಬ ಸ್ಪಷ್ಟ ನಿಲುವು ಆತನದು. ಆತನ ಭಾವ ಲಹರಿ ಶಿವ ಭಕ್ತಿಗೆ, ಶಿವಧ್ಯಾನಕ್ಕೆ, ಶಿವಸ್ಮರಣೆಗೆ, ಶಿವನ ಆರಾಧಿಸುವ ಮಹಿಮಾನ್ವಿತರಾದ ಶರಣರ ಹಿರಿಮೆಯನ್ನು ಹಾಡಿ ಹೊಗಳಲು ಮಾತ್ರ ಮೀಸಲಾಗಿದೆ. ಮುಂದೆ ಶರಣರ ಲೋಕೋದ್ಧಾರಕ ಕಾರ್ಯಗಳನ್ನು ರಗಳೆಗಳ ಮೂಲಕ ಬಿಂಬಿಸುತ್ತಾ ಶಿವಭಕ್ತರನ್ನು ದೈವತ್ವಕ್ಕೇರಿಸಿದ್ದಾನೆ. ಹರಿಹರನ ದೃಷ್ಟಿಯಲ್ಲಿ ಶರಣನೇ ಚರ್ಕವರ್ತಿ. ಇಹ–ಪರದಲ್ಲೆಲ್ಲ ಪೂಜ್ಯನಾದ ಆತ ಸಾಕ್ಷಾತ್ ವಿರೂಪಾಕ್ಷನೆಂದಿದ್ದಾನೆ. ಶಿವನ ಆರಾಧನೆಗೆ ತನ್ನ ಜೀವನ ಮೀಸಲಿಟ್ಟಿರುವ ಹರಿಹರ 'ಶಶಿಭೂಷಂಗೀಶ್ವರಂಗೆಯ್ದೆ ನಾಲಗೆಯಂ ಮಾರಿದೆ'(ಪಂ.ಶ.ಪದ್ಯ.81) ಎಂಬ ಮಾತು ಅಕ್ಷರಶಃ ಸತ್ಯ. ಆತನ ಪ್ರತಿ ಮಾತು, ವಿಚಾರ, ಭಕ್ತಿ, ಸಕಲವ್ರೂ ಶಿವ ಸ್ತುತಿಗೆ ಮೀಸಲಾಗಿರುವಾಗ ಶಿವನಿಗೆ ಎನ್ನ ನಾಲಿಗೆ ಮಾರಿಕೊಂಡೆನೆಂಬ ಮಾತಿನಲ್ಲಿ ಅತಿಶಯೋಕ್ತಿ ಇಲ್ಲ.

'ಈ ದೇಹಕ್ಕೋಸ್ಕರ ದೈನ್ಯ ಬಟ್ಟೆನಕಟಾ ನೀನಲ್ಲದನ್ಯತ್ರರಂ

ದೇಹೀ ಎಂಬುದ ಮಾಣಿಸೆನ್ನನುಳುಹಾ ಪಂಪಾಪುರಾಧೀಶ್ವರಾ'(ಪಂ.ಶ.ಪದ್ಯ.101) ಎಂಬಲ್ಲಿ ಇದುವರವಿಗೂ ಅರಿಷಡ್ವರ್ಗಗಳಿಂದ ತುಂಬಿದ ದೇಹದ ಮೇಲಿನ ಮೋಹ ಅಳಿದು ನಶ್ವರತೆಯ ಅರಿವುಂಟಾಗಿ ಮುಕ್ತಿಯ ಮಹತ್ತಿಯ ಕಡೆಗೆ ಮನಸ್ಸು ಹಪಹಪಿಸುತ್ತಿದೆ. ಆ ಮುಕ್ತಿಯ ಎಡೆಗೆ ತೆರಳಲು ಇರುವುದೊಂದೆ ಮಾರ್ಗ ಅದೇ ಪಂಪಾಪುರಾಧೀಶ್ವರನ ಭಕ್ತಿ.

ಭಕ್ತಿಯೇ ವೈರಾಗ್ಯದೆಡೆಗೆ, ಮುಕ್ತಿಯ ಕಡೆಗೆ ಸಾಗಲು ಇರುವ ಹಣತೆ. ಆ ಹಣತೆಯ ದೀಪ್ತಿಯಲಿ ಹರಿಹರನ ಪಂಪಾಶತಕದ ಹೊಳವು ಗೋಚರವಾಗುತ್ತದೆ.

ಹರಿಹರನ ಶತಕದ್ವಯಗಳು ಭಕ್ತಿಯ ಭವ್ಯತೆಯನ್ನು, ಭಾವಾವೇಶವನ್ನು, ಮುಕ್ತಿಯ ಮಹತ್ತತೆಯನ್ನು ತೋರ್ಪಡಿಸುವ ಶ್ರೇಷ್ಠ ಕೃತಿಗಳು. ರಕ್ಷಾಶತಕವು ಸಂಸಾರದ ಬಂಧನದಿಂದ ಬಿಡುಗಡೆ ಹೊಂದಿ ಶಿವನ ಭಕ್ತಿಯ ಕಡೆಗೆ, ಶಿವಧ್ಯಾನದ ಕಡೆಗೆ ಹೆಜ್ಜೆ ಇಟ್ಟರೆ, ಪಂಪಾ ಶತಕವು ಶಿವಕೃಪೆಗೊಳಗಾದ ಜೀವಿಯು ಮಾನವ ಜನ್ಮದ ಮಹತ್ವವನ್ನರಿತು ಅದನ್ನು ಸಾರ್ಥಕ ಪಡಿಸಿಕೊಳ್ಳುವ ಮೋಕ್ಷ ಮಾರ್ಗದೆಡೆಗೆ ಕೊಂಡೊಯ್ಯುತ್ತದೆ. ಮಾನವನಿಗೆ ಶಿವ ಕಾರುಣ್ಯದ ರಕ್ಷೆ ಅವಶ್ಯಕವೆಂಬುದು ರಕ್ಷಾ ಶತಕದ ಆಶಯವಾದರೆ, ಹಂಪೆಯ ವಿರೂಪಾಕ್ಷನುಳಿದು ಅನ್ಯರಿಲ್ಲ, ಆತನೇ ಉಸಿರು, ಆತನೇ ದೈವ, ಆತನೇ ಗುರು ಎಂಬ ಆಶಯ ಪಂಪಾಶತಕದ್ದು. ಎರಡೂ ಶತಕಗಳು ಒಂದಕ್ಕೊಂದು ಪೂರಕವಾಗಿವೆ. ನಾಗವರ್ಮಾಚಾರ್ಯನು ಕನ್ನಡದ ಮೊದಲ ಶತಕ ರಚನೆಕಾರನಾದರೂ ಆತನ ಕೃತಿ ಸಂಸ್ಕೃತಭೂಯಿಷ್ಟವಾಗಿದ್ದರೆ, ಹರಿಹರನ ಶತಕಗಳು ವೃತ್ತಗಳಲ್ಲಿ ರಚನೆಗೊಂಡಿದ್ದರೂ ಕಾಠಿಣ್ಯತೆಯಿಲ್ಲ, ಸರಳತೆ ಇದೆ. ಕನ್ನಡತನ, ದೇಶಿಯತೆ ಮೇಳೈಸಿ ನಿಂತಿವೆ. ಹಾಗಾಗಿ ಈಶತಕದ್ವಯಗಳೆರಡೂ ಪ್ರಭಾವಶಾಲಿಯಾಗಿವೆ, ಪರಿಣಾಮಕಾರಿಯಾಗಿವೆ,ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿವೆ. ಕನ್ನಡ ಸಾಹಿತ್ಯದಲ್ಲಿ ಸುಮಾರು 150ಕ್ಕೂ ಹೆಚ್ಚು ಶತಕ ಕೃತಿಗಳು ರಚಿತವಾಗಿದ್ದರೂ ಇತರ ಸಾಹಿತ್ಯ ಪ್ರಕಾರಗಳಂತೆ ಇವು ಪ್ರಸಿದ್ಧಿಯನ್ನು ಪಡೆಯಲಿಲ್ಲವೆಂಬುದು ಖೇದದ ಸಂಗತಿ. ಆದರೆ ಹರಿಹರನ ಶತಕದ್ವಯಗಳು ಇದಕ್ಕೆ ಹೊರತು. ಇವು ಕನ್ನಡ ಸಾಹಿತ್ಯದಲ್ಲಿ ಅಜರಾಮರವಾಗಿ ವಿರಾಜಿಸುತ್ತಾ, ಆತನ ಭಕ್ತಿಯ ಅನನ್ಯತೆಯನ್ನು ಸಾರುತ್ತಾ, ಸಕಲ ಜೀವಾತ್ಮರಿಗೆ ಲೇಸನ್ನುಂಟು ಮಾಡುವ ಉದಾತ್ತ ಮೌಲ್ಯಗಳನ್ನು ಹೊಂದಿವೆ ಎಂಬುದನ್ನು ಗುರುತಿಸಬಹುದು.

ಪರಾಮರ್ಶನ ಕೃತಿಗಳು

1. ಡಾ. ವೀರಣ್ಣ ರಾಜೂರ – ಶತಕ ಸಂಪುಟ – ವಿಶ್ವಕನ್ನಡ ಸಮ್ಮೇಳನ ಸಾಹಿತ್ಯಮಾಲೆ.
2. ಡಾ. ಆರ್. ಬಿ. ಚಿಲುಮಿ – ಹರಿಹರನ ರಕ್ಷಾಶತಕ–ಪಂಪಾಶತಕ ಮತ್ತು ಕನಕದಾಸರ ಹರಿಭಕ್ತಿಸಾರ : ತೌಲನಿಕ ಅಧ್ಯಯನ – ಪ್ರಸಾರಾಂಗ ಕ.ವಿ.ವಿ. ಧಾರವಾಡ
3. ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ – ಕನ್ನಡ ಸಂಸ್ಕೃತಿಗೆ ಹೊಸ ತಿರುವು ಕೊಟ್ಟ ಹರಿಹರ –ಪ್ರಸಾರಾಂಗ ಕ.ವಿ.ವಿ. ಧಾರವಾಡ.

ISSN NO:2231-3990

4. ರಂ. ಶ್ರೀ. ಮುಗಳಿ – ಕನ್ನಡ ಸಾಹಿತ್ಯ ಚರಿತ್ರೆ – ಗೀತಾ ಬುಕ್ ಹೌಸ್ ಮೈಸೂರು.

5. ಕಾಳೇಗೌಡ ನಾಗವಾರ – ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ (ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ 7) – ಸಪ್ನ ಬುಕ್ ಹೌಸ್ ಮೈಸೂರು.

ಚಂದ್ರಕಲ ಹೆಚ್.ಪಿ
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ,
ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು,
ವಿಜಯನಗರ, ಮೈಸೂರು.
ಮೊಬೈಲ್ ಸಂಖ್ಯೆ: 9731935579
E-Mail: chandrakalachandu367@gmail.com

ಚಂದ್ರಕಲ ಹೆಚ್.ಪಿ
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ,
ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು,
ವಿಜಯನಗರ, ಮೈಸೂರು.